
# ಶ್ರೀ ಸತ್ಯ ಸಾಯಿ ಲೋಕ ಸೇವಾ ಗುರುಕುಲಂ

**ಸತ್ಯ ಸಾಯಿ ಗ್ರಾಮ. ಮುದ್ದೇನಹಳ್ಳಿ ಪೋ., ಚಿಕ್ಕಬಳ್ಳಾಪುರ ಜಿಲ್ಲೆ - 562101**







*ಭೌತಿಕ ಪ್ರಪಂಚದ ವಿಜ್ಞಾನ ಮತ್ತು ಶಾಶ್ವತವಾದ ಆಧ್ಯಾತ್ಮಿಕತೆ ಎರಡನ್ನೂ ಕಲಿಸುವ ಸರಿಯಾದ ರೀತಿಯ ಶಿಕ್ಷಣವೆಂದರೆ ಭಾರತೀಯ ಗುರುಕುಲ ಶಿಕ್ಷಣ ವ್ಯವಸ್ಥೆ*

## ನಮ್ಮ ದೃಷ್ಟಿ

ಉತ್ತಮ ಬುದ್ಧಿಶಕ್ತಿ ಮತ್ತು ಸಹಾನುಭೂತಿ ಹೊಂದಿದ ಹೃದಯಯುಳ್ಳ, ಸಮರ್ಥರಾದ ಮತ್ತು ಸದೃಢವಾದ ವ್ಯಕ್ತಿಗಳನ್ನು ನಿರ್ಮಿಸುವುದಕ್ಕಾಗಿ, ವಂಚಿತ ಹಾಗು ಹಿಂದುಳಿದ ಗ್ರಾಮೀಣ ಮಕ್ಕಳಿಗೆ ಉತ್ತಮ ಗುಣಮಟ್ಟದ ಮೌಲ್ಯಾಧಾರಿತ ಸಮಗ್ರ ಶಿಕ್ಷಣವನ್ನು ಒದಗಿಸುವುದು ನಮ್ಮ ಉದ್ದೇಶ.

***ಸಾ ವಿದ್ಯಾ ವಿಮುಕ್ತಯೇ*** - ನಿಜವಾದ ಶಿಕ್ಷಣವು ವಿಮೋಚನೆ ಪಡೆಯುವುದಕ್ಕಾಗಿ

## ನಮ್ಮ ಧ್ಯೇಯೋದ್ದೇಶ

ಭಾರತದ 600 ಜಿಲ್ಲೆಗಳಲ್ಲಿ, ಪ್ರತಿಯೊಂದರಲ್ಲೂ ಮೌಲ್ಯಾಧಾರಿತ ಸಮಗ್ರ ಶಿಕ್ಷಣವನ್ನು ನೀಡುವ ಒಂದು ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವುದನ್ನು ಬೆಂಬಲಿಸುವುದು ಹಾಗು ಆ ಪ್ರದೇಶದ ಇತರ ಸಂಸ್ಥೆಗಳಿಗೆ ಮಾದರಿಯಾಗಿ ಕಾರ್ಯನಿರ್ವಹಿಸುವುದಾಗಿದೆ.

ಶಿಕ್ಷಣದ ಅಂತಿಮ ಗುರಿ ಚಾರಿತ್ರ್ಯ ಮತ್ತು ಜ್ಞಾನದ ಅಂತಿಮ ಗುರಿ ಪ್ರೇಮ

## ಶ್ರೀ ಸತ್ಯ ಸಾಯಿ ಲೋಕಾ ಸೇವಾ ಗುರುಕುಲಂ

ಶ್ರೀ ಸತ್ಯ ಸಾಯಿ ಲೋಕಾ ಸೇವಾ ಗುರುಕುಲಂ (ಎಸ್ಎಸ್ಎಸ್ಎಲ್ಎಸ್ ಜಿ) ಎಂಬುದು ಪ್ರಶಾಂತಿ ಬಾಲಮಂದಿರ ಟ್ರಸ್ಟ್‌ನ (ಪಿಬಿಎಂಟಿ) ಒಂದು ಘಟಕವಾಗಿದೆ. ಇದು ಗ್ರಾಮೀಣ ಪ್ರದೇಶದ ಅಗತ್ಯವಿರುವವರಿಗೆ ವಿಶಿಷ್ಟವಾದ ಆಧ್ಯಾತ್ಮಿಕ ಮತ್ತು ಬೌದ್ಧಿಕ ಶಿಕ್ಷಣವನ್ನು ನಿಸ್ವಾರ್ಥವಾಗಿ ನೀಡುವ ನಿಟ್ಟಿನಲ್ಲಿ ಶ್ರೀ ಸತ್ಯ ಸಾಯಿಬಾಬಾರವರ ತತ್ತ್ವಗಳ ಆಧಾರದ ಮೇಲೆ ದೃಢವಾಗಿ ನಿಂತಿದೆ.

*ಸರ್ವೇ ಜ್ಞಾನೋಪಾಸನ ಸಂಪನ್ನಃ, ಸರ್ವೇ ಸಮುಧಿತ ಗುಣೈಃ,*

*ಸರ್ವೇ ವೇದವಿದಃ ಧೀರಾಃ, ಸರ್ವೇ ಲೋಕಹಿತೇ ರತಾಃ*

## ಗುರುಕುಲಂನ ವಿಶಿಷ್ಟತೆ

ನಮ್ಮ ಗುರುಕುಲಂ, ಈ ವ್ಯವಸ್ಥೆಯ ಸಂಸ್ಥಾಪಕರಾದ ಭಗವಾನ್ ಶ್ರೀ ಸತ್ಯ ಸಾಯಿಬಾಬಾರವರ ಆಧ್ಯಾತ್ಮಿಕ ತತ್ತ್ವವನ್ನು ಆಧರಿಸಿದೆ. ಅವರು ಶೈಕ್ಷಣಿಕ, ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣದ ಸರಿಯಾದ ಸಮತೋಲನದೊಂದಿಗೆ ಮಗುವಿನ ಸಮಗ್ರ ಅಭಿವೃದ್ಧಿ ಸಾಧಿಸಬೇಕೆಂದು ದೃಢವಾಗಿ ನಂಬಿದ್ದರು.

ಇತ್ತೀಚಿನ ದಿನಗಳಲ್ಲಿ ನಾವು ನಮ್ಮ ವಿಧಾನವನ್ನು ಪರಿಶೀಲಿಸಿದ್ದೇವೆ ಮತ್ತು ಸಂಸ್ಥಾಪಕರ ದೃಷ್ಟಿಯೊಂದಿಗೆ ಇದನ್ನು ಪುನರ್ನಿರ್ಮಾಣ ಮಾಡಿ, ಉತ್ತಮ ಗುಣಮಟ್ಟದ ಶೈಕ್ಷಣಿಕ ಶಿಕ್ಷಣವನ್ನು ನೀಡುವುದು, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳೊಂದಿಗೆ ಸರಿಯಾಗಿ ಸಮತೋಲನ, ಮಾನವಕುಲಕ್ಕೆ ಸೇವೆ, ಸಹ ಜೀವಿಗಳ ಬಗ್ಗೆ ಸಹಾನುಭೂತಿ, ಭಾರತದ ಆಧ್ಯಾತ್ಮಿಕ ಸಂಸ್ಕೃತಿಯ ತಿಳುವಳಿಕೆ ಮತ್ತು ದೈನಂದಿನ ಜೀವನದಲ್ಲಿ ಅದರ ಅಭ್ಯಾಸ ಇವುಗಳನ್ನು ಒಳಗೊಂಡಿದೆ. ಮಗುವು ಸುಸಂಗತವಾದ ವ್ಯಕ್ತಿತ್ವವನ್ನು ಹೊಂದಲು ಮತ್ತು ಜೀವನದ ಒತ್ತಡಗಳನ್ನು ತಡೆದುಕೊಳ್ಳಲು ಸಾಧ್ಯವಾಗುವಂತೆ, ಯಾವುದೇ ಪ್ರಗತಿಪರ ಶಿಕ್ಷಣ ವ್ಯವಸ್ಥೆಯಲ್ಲಿ, ದೈಹಿಕ, ಬೌದ್ಧಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಅಂಶಗಳಿಗೆ ಸಮಾನ ಒತ್ತು ನೀಡಬೇಕಾಗಿದೆ. ದುರದೃಷ್ಟವಶಾತ್, ಈ ಸಮಗ್ರ ಶಿಕ್ಷಣ ತತ್ತ್ವಶಾಸ್ತ್ರವು ಇಂದಿನ ಶೈಕ್ಷಣಿಕ ಶಿಕ್ಷಣದಲ್ಲಿ ಕೊರತೆಯನ್ನು ಕಂಡುಕೊಂಡ ಕಾರಣ, ಇದನ್ನು ಈ ಕೂಡಲೇ ಸರಿಪಡಿಸಲು ಅಗತ್ಯವಿದೆ.

ಸರ್ವಕಾಲಿಕ ಸಾಯಿ ತತ್ತ್ವಗಳ ಆಧಾರದ ಮೇಲೆ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣವನ್ನು ಶೈಕ್ಷಣಿಕ ಕಾರ್ಯಕ್ರಮದೊಂದಿಗೆ ಸಂಯೋಜಿಸುವ ಮೂಲಕ ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. ನಮ್ಮ ಗುರುಕುಲಂನ ವ್ಯವಸ್ಥೆಯಲ್ಲಿ ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ವಾಸಿಸುತ್ತಾರೆ. ಪ್ರೇಮ ಮತ್ತು ಕಾಳಜಿಯ ವಾತಾವರಣವನ್ನು ನಿರ್ಮಿಸುವಲ್ಲಿ ಯಶಸ್ವಿಗಳಾಗಿರುತ್ತಾರೆ.

## ಭಕ್ತಿ, ಶಿಸ್ತು, ಪ್ರೇಮ  – ಪರಿವರ್ತನೆಯ ಸಾಧನಗಳು

ಶಿಕ್ಷಣದಲ್ಲಿ ಎರಡು ಗುರಿಗಳಿವೆ ಎಂದು ಹೇಳಲಾಗುತ್ತದೆ - ಮೊದಲನೆಯದು ಜೀವನಾ ಉಪಾಧಿ, ಜೀವನವನ್ನು ನಡೆಸಲು ಜ್ಞಾನ ಮತ್ತು ಕೌಶಲ್ಯಗಳನ್ನು ನೀಡುವ ಶಿಕ್ಷಣ. ಎರಡನೆಯದು ಜೀವನದ ಜೀವಿತ ಪರಮಾಧಿ, ಅದು ಅಂತಿಮ ಗುರಿಯಾದ ದೇವರ ಸಾಕ್ಷಾತ್ಕಾರವಾಗಿದೆ. ಶ್ರೀ ಸತ್ಯ ಸಾಯಿ ಲೋಕಾ ಸೇವಾ ಗುರುಕುಲಂನ ವಿದ್ಯಾರ್ಥಿಗಳು ಒಂದು ವಿಶಿಷ್ಟವಾದ ಕಲಿಕೆಯ ಮಾದರಿಗೆ ಒಡ್ಡಿಕೊಳ್ಳುತ್ತಾರೆ. ಅದು ಕೇವಲ ತರಗತಿ ಕೊಠಡಿಗಳಿಗೆ ಸೀಮಿತವಾಗಿಲ್ಲ .ಹಾಸ್ಟೆಲ್ ಕೋಣೆಗಳಿಂದ ಹಿಡಿದು ಊಟದ ಸಭಾಂಗಣಗಳವರೆಗು, ಆಟದ ಮೈದಾನದವರೆಗು, ವಿದ್ಯಾರ್ಥಿಗಳು ಎಲ್ಲೆಡೆಯೂ ಮೌಲ್ಯಗಳು ಮತ್ತು ಪಾಠಗಳಿಗೆ ಒಡ್ಡಿಕೊಳ್ಳುತ್ತಾರೆ - ಅದು ಹೃದಯದಿಂದ ಮೂಡಿದ ಶಿಕ್ಷಣ.

ವಿದ್ಯಾರ್ಥಿಗಳು ಬೌದ್ಧಿಕ, ಭಾವನಾತ್ಮಕ, ತಾರ್ಕಿಕ, ನೈತಿಕ ಮತ್ತು ಆಧ್ಯಾತ್ಮಿಕ ಮಟ್ಟದಲ್ಲಿ ತೊಡಗಿಸಿಕೊಂಡಿರುತ್ತಾರೆ, ಅವರೊಳಗಿರುವ ಸುಪ್ತ ಬುದ್ಧಿವಂತಿಕೆಯನ್ನು ಯಾವಾಗಲೂ ಅದನ್ನು ಆಲಿಸಲು ಅವರನ್ನು ಪ್ರೇರೇಪಿಸುತ್ತದೆ, ಉತ್ತೇಜಿಸುತ್ತದೆ ಮತ್ತು ವರ್ತಿಸುವಂತೆ ಮಾಡುತ್ತದೆ. ಆದ್ದರಿಂದ, ಈ ಸಂಸ್ಥೆಗಳ ವಿಶಿಷ್ಟ ಲಕ್ಷಣವೆಂದರೆ ಆಧುನಿಕ ಮಾರ್ಗಗಳಲ್ಲಿ ಉತ್ತಮವಾದ, ಉದಾರವಾದ, ಉತ್ತಮ ಗುಣಮಟ್ಟದ **‘ಮಾನವರನ್ನಾಗಿ ರೂಪಿಸುವುದು’** ಮಾಡುವಂತಹ ಶಿಕ್ಷಣವನ್ನು ನೀಡುವುದು.  ಭಕ್ತಿ, ಶಿಸ್ತು, ಪ್ರೀತಿ ಮತ್ತು ಪರಸ್ಪರ ಸಹಕಾರದ ವಾತಾವರಣದಲ್ಲಿ ಭಾರತೀಯ ಪರಂಪರೆಯ ಉದಾತ್ತ ಮೌಲ್ಯಗಳೊಂದಿಗೆ ಬೆರೆಸುವುದು. ಶ್ರೀ ಸತ್ಯ ಸಾಯಿಬಾಬಾರವರು, ಶಿಕ್ಷಣವನ್ನು ಮಾಹಿತಿಯ ಕ್ರೋಢೀಕರಣವಾಗಿ ಪರಿಗಣಿಸದೆ ಪರಿವರ್ತನೆಯ ಸಾಧನವೆಂದು ಪರಿಗಣಿಸಿದ್ದಾರೆ.



## ದೈನಂದಿನ ಚಟುವಟಿಕೆ  -  ಎದ್ದೇಳುವುದು ಬೇಗ ಮತ್ತು ಮಲಗುವುದು ಬೇಗ

ದೈನಂದಿನ ಚಟುವಟಿಕೆಯು ಬೆಳಿಗ್ಗೆ 5 ಗಂಟೆಗೆ ಸುಪ್ರಭಾತ ಪಠಣದಿಂದ ಪ್ರಾರಂಭವಾಗುತ್ತದೆ ನಂತರ ಯೋಗಾಸನ ಮತ್ತು ಧ್ಯಾನ / ವ್ಯಾಯಾಮ ಇತ್ಯಾದಿಗಳಿಗೆ ಮುಂದುವರೆಯುತ್ತದೆ.

ಬೆಳಗಿನ ಉಪಾಹಾರದ ನಂತರ - ಶೈಕ್ಷಣಿಕ ತರಗತಿಗಳು ಬೆಳಿಗ್ಗೆ 8 ರಿಂದ ಪ್ರಾರಂಭವಾಗುತ್ತವೆ ಮತ್ತು  ಊಟಕ್ಕೆ 1 ಗಂಟೆ  ವಿರಾಮವಿರುವುದು. ಸಂಜೆ 4 ಗಂಟೆಯವರೆಗೆ ಅಧ್ಯಯನಗಳು ಮುಂದುವರಿಯುತ್ತವೆ. ಇದು ಪ್ರಾಯೋಗಿಕ ಕೆಲಸ ಮತ್ತು ಅಧ್ಯಯನದ ಸಮಯವನ್ನು ಒಳಗೊಂಡಿದೆ

ಸಂಜೆ ಚಟುವಟಿಕೆಗಳು ಹೊರಾಂಗಣ ಆಟಗಳನ್ನು ಒಳಗೊಂಡಿವೆ. ನಂತರ ಸಂಜೆ ಸತ್ಸಂಗ ಮತ್ತು ನಂತರ ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳ ಅಧ್ಯಯನ

ಒಂದು ಲೋಟ ಹಾಲು ಮತ್ತು ಪ್ರಾರ್ಥನೆಯ ನಂತರ ವಿದ್ಯಾರ್ಥಿಗಳು ಬೇಗನೆ ಮಲಗುತ್ತಾರೆ



## NIOS ನೊಂದಿಗೆ ಸಂಯೋಜನೆ

ಗುರುಕುಲಂನ ಎಲ್ಲಾ ವಿದ್ಯಾರ್ಥಿಗಳು [ಎನ್‌ಐಒಎಸ್] ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ ಸಿಸ್ಟಮ್ ಅಡಿಯಲ್ಲಿ ಅಧ್ಯಯನ ಮಾಡುತ್ತಾರೆ.

ಎನ್‌ಐಒಎಸ್ ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಸ್ವಾಯತ್ತ ಸಂಸ್ಥೆಯಾಗಿದೆ.

ನಮ್ಮ ವಿದ್ಯಾರ್ಥಿಗಳ ಮೇಲೆ ನಿರಂತರವಾಗಿ ಮೌಲ್ಯಮಾಪನ ಮತ್ತು ಪರೀಕ್ಷೆಗಳ ಒತ್ತಡವನ್ನು ಕಡಿಮೆ ಮಾಡಲು, ತಮ್ಮ ತಮ್ಮ ಆಸಕ್ತಿ ಮತ್ತು ಒಲವಿನ ವಿಷಯಗಳನ್ನು ಆಯ್ಕೆಮಾಡಲು ಹೆಚ್ಚಿನ ಆದ್ಯತೆ ನೀಡುವ ಮೂಲಕ ಉತ್ತಮ ಕಾರ್ಯಕ್ಷಮತೆಗೆ ಉತ್ತೇಜನವಾಗುತ್ತದೆ. ಆದ ಕಾರಣ ನಮ್ಮ ದೃಷ್ಟಿಗೆ ಉತ್ತಮವೆನಿಸಿರುವುದು ಸಮತೋಲಿತ ಮತ್ತು ಸಮಗ್ರ ಶಿಕ್ಷಣವಾದ NIOS ವ್ಯವಸ್ಥೆಯು ಭರವಸೆಯಾಗಿದೆ.

## ಪ್ರವೇಶಕ್ಕೆ ಅರ್ಹತೆ

ಈಗ 5 ನೇ ತರಗತಿ ಅಧ್ಯಯನ ಮಾಡಿದ ಅಥವಾ ಮಾಡುತ್ತಿರುವ ಹುಡುಗರು / ಹುಡುಗಿಯರು ಮತ್ತು 31 ಮಾರ್ಚ್ 2011 ರಂದು ಅಥವಾ ಮೊದಲು ಜನಿಸಿರುವವರು.

## ಪ್ರವೇಶ

ನಿಮ್ಮ ಆದ್ಯತೆಯ ಕ್ಯಾಂಪಸ್‌ನಲ್ಲಿ ಪ್ರಾಥಮಿಕ ಸಂದರ್ಶನಕ್ಕಾಗಿ ಆನ್‌ಲೈನ್‌ನಲ್ಲಿ www.srisathyasailokasevagurukulam.org/admissions-2021-22 ನಲ್ಲಿ ನೋಂದಾಯಿಸಿ.

ಅರ್ಹತೆ ಪಡೆದವರು ಮುಂದಿನ ಹಂತದ ಆಯ್ಕೆ ಪ್ರಕ್ರಿಯೆಗೆ ಮುಂದುವರಿಯುತ್ತಾರೆ

## ಶಿಕ್ಷಣವು ಸಂಪೂರ್ಣವಾಗಿ ಉಚಿತವಾಗಿದೆ

ವೈಯಕ್ತಿಕ ಖರ್ಚಿನ ಜೊತೆಗೆ ವಿದ್ಯಾರ್ಥಿಗಳು ಬೋರ್ಡಿಂಗ್ ಮತ್ತು ಹಾಸ್ಟೆಲ್ ನಿರ್ವಹಣೆ ಶುಲ್ಕವನ್ನು ಪಾವತಿಸಬೇಕಾಗುತ್ತದೆ

## ಸಂತೋಷದ (ಆನಂದದ/ ನಲಿವಿನ/ ಸಂತಸದ ) ಕಲಿಕೆ

ಮುಂಬರುವ ದಶಕಗಳಲ್ಲಿ ಮನುಷ್ಯನ ಜೀವನದಲ್ಲಿ ಒತ್ತಡ ಹೆಚ್ಚಾಗುವ ಸೂಚನೆಗಳು ಬಹಳಷ್ಟಿವೆ. ಆದ್ದರಿಂದ, ಅದನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ಇಂದಿನ ಶಾಲೆಗಳು ವಿಚಾರ ಮಾಡುವುದು ಅವಶ್ಯಕವಾಗಿದೆ. ಬುದ್ಧಿಮತ್ತೆಯ ಪ್ರಮಾಣಕ್ಕಿಂತ ಆಧ್ಯಾತ್ಮಿಕ ಪ್ರಮಾಣ ಮತ್ತು ಭಾವನಾತ್ಮಕ ಪ್ರಮಾಣವು ಅಷ್ಟೇ ಮುಖ್ಯವಾಗುತ್ತಿದೆ ಎಂದು ಸಂಶೋಧನೆ ತೋರಿಸಿದೆ. ಸರಿಯಾದ ನಡವಳಿಕೆಯನ್ನು ಬೆಳೆಸಿಕೊಳ್ಳಲು ಮಗುವಿಗೆ ಸಹಾಯ ಮಾಡಲು ನಾವು ಈ ಜವಾಬ್ದಾರಿಯನ್ನು ಬಹಳ ಗಂಭೀರವಾಗಿ ಪರಿಗಣಿಸುತ್ತೇವೆ. ಇದು ಅವನ ಅಥವಾ ಅವಳ ಸ್ವಂತ ಜೀವನದಲ್ಲಿ ಹಾಗು ಅವನ ಅಥವಾ ಅವಳ ಸುತ್ತಮುತ್ತಲಿನವರ ಜೀವನದಲ್ಲಿ ಸಂತೋಷ ಮತ್ತು ನಲಿವನ್ನು ಉಂಟುಮಾಡುತ್ತದೆ. ವಿಮರ್ಶಾತ್ಮಕ ಚಿಂತನೆ, ಸಂವಹನ, ಸಹಯೋಗ ಮತ್ತು ಸೃಜನಶೀಲತೆ ಈ ನಾಲ್ಕು ಅಂಶಗಳನ್ನು ಶಿಕ್ಷಣ ತಜ್ಞರು ಜಾಗತಿಕ ಸಮಾಜದ ಇಪ್ಪತ್ತೊಂದನೇ ಶತಮಾನದ ವಿದ್ಯಾರ್ಥಿಗಳಿಗೆ ಪ್ರಮುಖ ಕೌಶಲ್ಯಗಳೆಂದು ವ್ಯಾಖ್ಯಾನಿಸುತ್ತಾರೆ. ಆದರೆ, ನಾವು ಐದನೆಯದಾದ ಚಾರಿತ್ರ್ಯವನ್ನು ಅತ್ಯಂತ ಮುಖ್ಯವೆಂದು ಪರಿಗಣಿಸುತ್ತೇವೆ. ಸರಳವಾಗಿ ಅರ್ಥವಾಗುವಂತೆ ಹೇಳುವುದಾದರೆ, ಚಾರಿತ್ರ್ಯವು ಯಾವಾಗಲೂ ಸರಿಯಾದ ಕೆಲಸವನ್ನು ಮಾಡುವ ಸಾಮರ್ಥ್ಯ ಹೊಂದಿದೆ. ಈ ಎಲ್ಲದಕ್ಕೂ ಸಾಕಷ್ಟು ಸಮಯ ಮತ್ತು ಕೇಂದ್ರೀಕೃತ ಪ್ರಯತ್ನದ ಅಗತ್ಯವಿದೆ. ಆದ್ದರಿಂದ, ಮಗುವಿನ ಅರ್ಹತೆ ಮತ್ತು ಆಸಕ್ತಿಯ ಆಧಾರದ ಮೇಲೆ ಮಗು ಮತ್ತು ಪೋಷಕರಿಗೆ ಸರಿಯಾದ ವಿಷಯಗಳನ್ನು ಆಯ್ಕೆ ಮಾಡಲು ಅನುವು ಮಾಡಿಕೊಡುವ ಮೂಲಕ ಅನಗತ್ಯ ಶೈಕ್ಷಣಿಕ ಹೊರೆ ಕಡಿಮೆ ಮಾಡಿ, ಮಗುವಿಗೆ ಅಪಾರ ಸಹಾಯ ಮಾಡುತ್ತದೆ ಎಂದು ನಂಬಿದ್ದೇವೆ. ಮತ್ತು ಇತರ ಪ್ರಮುಖ ಕೌಶಲ್ಯಗಳನ್ನು ಕಲಿಯಲು ಸಾಕಷ್ಟು ಸಮಯವನ್ನು ನೀಡುತ್ತದೆ. ನಾವು ಕೇವಲ ಬದುಕುಳಿಯುವ ಉದ್ದೇಶವನ್ನು ಹೊಂದಿರದೇ, ಇಪ್ಪತ್ತೊಂದನೇ ಶತಮಾನವು ಅಭಿವೃದ್ಧಿ ಹೊಂದುವುದೆಂಬ ಭರವಸೆಯೊಂದಿಗೆ ಸಾಗೋಣ.

*ಕ್ರಿಯೆಯಲ್ಲಿ ತೊಡಗಿರುವ ವಿದ್ಯಾರ್ಥಿಗಳ ಕಿರು ನೋಟ*









| ಗುರುಕುಲಗಳ ಸಂಪರ್ಕಗಳು (ವಿದ್ಯಾರ್ಥಿಗಳ/ಹುಡುಗರ) | |
|---|---|
| **ಕಲಬುರಗಿ**: ಶ್ರೀ ಸತ್ಯ ಸಾಯಿ ವಿದ್ಯಾನಿಕೇತನ. ನವನಿ, ಒಕಾಲಿ ಪೋಸ್ಟ್, ಕಮಲಾಪುರ, ಕಲಬುರಗಿ ಜಿಲ್ಲೆ, 585 313 ದೂರವಾಣಿ: 9986515663, 9535974309 | **ವಿಜಯಪುರ** : ಶ್ರೀ ಸತ್ಯ ಸಾಯಿ ಪ್ರೇಮನಿಕೇತನಂ ಅಂಜುಟಗಿ, ಇಂಡಿ ತಾ., ವಿಜಿಯಿಪುರ ಜಿಲ್ಲೆ, 586 204 ದೂರವಾಣಿ: 8431081249, 8431097045 |
| **ಮಂಡ್ಯ** : ಶ್ರೀ ಸತ್ಯ ಸಾಯಿ ಶಾರದಾನಿಕೇತನಂ ಮಾರದೇವನಹಳ್ಳಿ ಗ್ರಾಮ, ಚಂದಗಲು ಪೋಸ್ಟ್, ದುಡ್ಡ ಹೋಬಳಿ, ಮಂಡ್ಯ ತಾ. & ಜಿಲ್ಲೆ, 571 405 ದೂರವಾಣಿ : 8197693176, 9611210554 | **ಕೊಪ್ಪಳ** : ಶ್ರೀ ಸತ್ಯ ಸಾಯಿ ಸೇವಾನಿಕೇತನಂ ಕುದ್ರಿಕೊಟಗಿ, ಮಲಕ ಸಮುದ್ರ ಪೋಸ್ಟ್, ಯಲಬುರಗ ತಾ., ಕೊಪ್ಪಳ ಜಿಲ್ಲೆ - 583 236 ದೂರವಾಣಿ: 7349235747, 8277494238 |
| **ವಿಜಯನಗರ** : ಶ್ರೀ ಸತ್ಯ ಸಾಯಿ ವಿಶ್ವನಿಕೇತನಂ ಇಂಗಲಗಿ, ಕಾರಿಗಾನುರು ಪೋಸ್ಟ್, ಹೊಸಪೇಟೆ ತಾ., ವಿಜಯನಗರ ಜಿಲ್ಲೆ - 583 223 ದೂರವಾಣಿ: 9986413946, 9513878851 | **ತುಮಕೂರು** : ಶ್ರೀ ಸತ್ಯ ಸಾಯಿ ಕಾರುಣ್ಯನಿಕೇತನಂ ಗಾಣದಹುಣಸೆ ಗ್ರಾಮ, ಸಿರಾ ತಾ., ತುಮಕೂರು ಜಿಲ್ಲ- 572 115 ದೂರವಾಣಿ : 9449103145, 9482470951 |
| **ಬೆಳಗಾವಿ** : ಶ್ರೀ ಸತ್ಯ ಸಾಯಿ ನಿತ್ಯನಿಕೇತನಂ ತೇರಗಲಿ ಗ್ರಾಮ, ಕಾನ್ಬುರ್ ತಾ, ಬೆಳಗಾವಿ ಜಿಲ್ಲೆ, 591302 ಪೋಸ್ಟ್ : 7026274153, 9902884807 | **ಕಾರವಾರ** : ಶ್ರೀ ಸತ್ಯ ಸಾಯಿ ಸತ್ವನಿಕೇತನಂ ಬೇಲೂರು ಗ್ರಾಮ, ಕಾರವಾರ ತಾ. ಉತ್ತರ ಕನ್ನಡ ಜಿಲ್ಲೆ, 581400 ದೂರವಾಣಿ : 9242453243, 9972439173 |
| **ಚಿಕ್ಕಬಳ್ಳಾಪುರ** : ಶ್ರೀ ಸತ್ಯ ಸಾಯಿ ಲೋಕ ಸೇವಾ ಹೈ ಸ್ಕೂಲ್ , ಶ್ರೀ ಸತ್ಯ ಸಾಯಿ ಗ್ರಾಮ ಮುದ್ದೇನಹಳ್ಳಿ ಪೋಸ್ಟ್, ಚಿಕ್ಕಬಳ್ಳಾಪುರ ತಾ. /ಜಿಲ್ಲೆ 562101 ದೂರವಾಣಿ : 9108760062, 9901591032 | **ಹಾಸನ** : ಶ್ರೀ ಸತ್ಯ ಸಾಯಿ ಸತ್ಯನಿಕೇತನಂ , ಚೆನ್ನೇನಹಳ್ಳಿ, ಇಬ್ಬೀಡು ಪೋಸ್ಟ್, ಬೇಲೂರು ತಾಲೂಕ್, ಹಾಸನ ಜಿಲ್ಲೆ, 573216 ದೂರವಾಣಿ : 8431080217, 9664303996 |
| **ಉಡುಪಿ : ಶ್ರೀ ಸತ್ಯ ಸಾಯಿ ಅನನ್ಯನಿಕೇತನಂ ,** | **ಜಯಪುರ** : ಶ್ರೀ ಸತ್ಯ ಸಾಯಿ ದಿವ್ಯನಿಕೇತನಂ ಶೃಂಗೇರಿ ರಸ್ತೆ, ಜಯಪುರ ಪೋಸ್ಟ್, ಕೊಪ್ಪ ತಾಲೂಕ್, |

| | |
|---|---|
| ಶ್ರೀ ಸೀತಾರಾಮ ಕಲ್ಯಾಣ ಮಂಟಪ, ಶ್ರೀ ರಾಮ ಮಂದಿರದ ಹತ್ತಿರ, ನಾಡ ಬಡಕೇರಿ, ಗುಡ್ಡೇನಗಾಡಿ -ನಾಡ ಬಿದುನೂರ್ ತಾಲೂಕ್, 576224 ದೂರವಾಣಿ : 9481758414, 8431077698 | ಚಿಕ್ಕಮಗಳೂರು ಜಿಲ್ಲೆ. 577123 ದೂರವಾಣಿ : 7411371599, 9113684934 |
| **ಶಿವಮೊಗ್ಗ :** ಶ್ರೀ ಸತ್ಯ ಸಾಯಿ ಸರ್ವನಿಕೇತನಂ ಕಮರೂರು, ಬೆನ್ನೂರು ಪೋಸ್ಟ್, ಚಂದ್ರಗುತ್ತಿ ಹೋಬ್ಳಿ, ಸೊರಬ ತಾಲೂಕ್, ಶಿವಮೊಗ್ಗ ಜಿಲ್ಲೆ, 577419 ದೂರವಾಣಿ : 8431060673, 6363977361 | **ಮೈಸೊರ್ :** ಶ್ರೀ ಸತ್ಯ ಸಾಯಿ ಅನಂತನಿಕೇತನಂ, ದೈತ್ಯನಕೆರೆ ಕಾವಲ ಗ್ರಾಮ, ಹುನೂಸುರು ತಾಲೂಕ್, ಮೈಸೂರ್ ಜಿಲ್ಲೆ, 571189 ದೂರವಾಣಿ: 8880370999, 8431067253 |
| ಗುರುಕುಲಗಳ ಸಂಪರ್ಕಗಳು (*ವಿದ್ಯಾರ್ಥಿನಿಯರ / ಹುಡಿಗಿಯರ*) | |
| **ಗದಗ :** ಶ್ರೀ ಸತ್ಯ ಸಾಯಿ ವಾಣಿನಿಕೇತನಂ & ಹಾವೇರಿ ಕ್ಯಾಂಪಸ್ ಮಜ್ಜೂರು , ಶಿರಹಟ್ಟಿ ತಾ., ಗದಗ ಜಿಲ್ಲೆ, 582 120 ದೂರವಾಣಿ : 8548997123, 7353678572 | **ನಲ್ಲಕದಿರೇನಹಳ್ಳಿ** – ಪ್ರಶಾಂತಿ ಬಾಲಮಂದಿರ ಗರ್ಲ್ಸ್ ಹೈ ಸ್ಕೂಲ್ & **ದೊಡ್ಡಬಳ್ಳಾಪುರ, ಕೋಲಾರ ಕ್ಯಾಂಪಸ್** ದೂರವಾಣಿ: 9703529975, 8431945141 |
| **ಚಿಕ್ಕಮಗಳೂರು :** ಶ್ರೀ ಸತ್ಯ ಸಾಯಿ ಶ್ರೀನಿಕೇತನಂ & ಕೊಡಗು ಕ್ಯಾಂಪಸ್ ಮಳಿಗೆ, ಜಯಪುರ, ಕೊಪ್ಪ ತಾಲೂಕ್. ಚಿಕ್ಕಮಗಳೂರು ಜಿಲ್ಲೆ -577 123 ದೂರವಾಣಿ: 8147951022, 8147951077 | **ಮದುರೈ :** ಶ್ರೀ ಸತ್ಯ ಸಾಯಿ ಮೀನಾಕ್ಷಿನಿಕೇತನಂ , ಶ್ರೀ ಸತ್ಯ ಸಾಯಿ ಗ್ರಾಮ, ಸೇವುಗಂಪಟ್ಟಿ,ನೀಲಕೊಟ್ಟೈ -ತಾಲೂಕ್ ದಿಂಡಿಗಲ್ಲು ಜಿಲ್ಲೆ - 624211 ದೂರವಾಣಿ : 9578555000, 9585782232 |
| ದೊಡ್ಡಬಳ್ಳಾಪುರ, ಹಾವೇರಿ, ಕೊಡಗು ಮತ್ತು ಕೋಲಾರ ಕ್ಯಾಂಪಸ್‌ಗಳನ್ನು ಸ್ಥಾಪಿಸಲಾಗುತ್ತಿದೆ - ಮಾಹಿತಿ ಮತ್ತು ಪ್ರಾಥಮಿಕ ಸಂದರ್ಶನಕ್ಕಾಗಿ ಈಗ ಅಸ್ತಿತ್ವದಲ್ಲಿರುವ ಕ್ಯಾಂಪಸ್‌ಗೆ ಸಂಪರ್ಕವನ್ನು ಹೊಂದಿದೆ | |

Public Relations Office – Muddenahalli – 9499360933, 08154240700 ext.9016

*ಶ್ರೀ ಸತ್ಯ ಸಾಯಿ ಬಾಬಾರವರ ತತ್ತ್ವ ಶಾಸ್ತ್ರವು ಮಾನವೀಯ ಮೌಲ್ಯಗಳಾದ ಸತ್ಯ, ಧರ್ಮ, ಶಾಂತಿ, ಪ್ರೇಮ ಮತ್ತು ಅಹಿಂಸೆಗಳ ಆಧಾರದ ಮೇಲೆ ಸ್ಥಾಪಿತವಾಗಿದೆ. ಅದು ಸರ್ವೋಚ್ಚ ಆಧ್ಯಾತ್ಮಿಕ ಜ್ಞಾನ ಮತ್ತು ಏಕಾತ್ಮ ಭಾವವನ್ನು ಮುಖ್ಯವಾಗಿ ಪರಿಗಣಿಸಿದೆ.*

## ಕ್ರಿಯೆಯಲ್ಲಿ ತೊಡಗಿರುವ ವಿದ್ಯಾರ್ಥಿನಿಯರ ಕಿರು ನೋಟ







